DECEMBER 31,2024
ALL INDIA RADIO- DHARWAD
PRADESH SAMACHARA (KANNADA) 12PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವವರು: ವಿವೇಕಾದಿತ್ಯ ಕನಿಯಾಲ

<><><>

ಕಲ್ಯಾಣ ಕರ್ನಾಟಕದ, ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆಗೆ ಪ್ರಸಿದ್ಧವಾದ, ಕಿನ್ನಾಳ ಗ್ರಾಮ ಪಂಚಾಯ್ತಿಗೆ, ಕೇಂದ್ರದ 'ಮಹಿಳಾ ಸ್ನೇಹಿ ಗ್ರಾಮ ಪಂಚಾಯ್ತಿ' ಪ್ರಶಸ್ತಿ ಸಂದಿದೆ. ಕೊಪ್ಪಳ ಜಿಲ್ಲೆ, ಗಂಗಾವತಿ ವಿಧಾನಸಭಾ ಕ್ಷೇತ್ರದ, ಕಿನ್ನಾಳ ಅಪರೂಪದ ಕಿನ್ನಾಳ ಬೊಂಬೆ ತಯಾರಿಕೆಗೆ ಹೆಸರುವಾಸಿ. ಕೊಪ್ಪಳ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಾಹುಲ್ ರತ್ನಂ ಪಾಂಡೆ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ರಾಹುಲ್ ರತ್ನಂ ಪಾಂಡೆ ಧ್ವನಿ 29 ಸೆಕೆಂದುಗಳು

<><><>

ರಾಜ್ಯದ ನಕ್ಸಲೀಯರು ಶರಣಾಗತರಾಗಿ, ಸಮಾಜದ ಮುಖ್ಯವಾಹಿನಿಗೆ ಬರಲು, ಸರ್ಕಾರ ಬಯಸುತ್ತದೆ. ಈಗಾಗಲೇ ಶರಣಾಗತಿ ನೀತಿ ರೂಪಿಸಿದ್ದು, ಸರಳೀಕರಿಸಿ, ಸಮರ್ಪಕವಾಗಿ ಜಾರಿಗೊಳಿಸಲಾಗುವುದು, ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಶಾಂತಿ ನೆಲೆಸುವಂತೆ ಕ್ರಮಕೈಗೊಳ್ಳಲು, ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ನಕ್ಸಲೀಯರು ಮುಖ್ಯವಾಹಿನಿಗೆ ಬರಲು, ಮಾತುಕತೆ ನಡೆಸಲು ಮುಂದಾದರೆ, ಈ ಪ್ರಕ್ರಿಯೆಯನ್ನು ಸರ್ಕಾರ, ಕಾನೂನಿನ ಚೌಕಟ್ಟಿನಲ್ಲಿ ಸ್ವಾಗತಿಸಿ, ಸಹಾನುಭೂತಿ ಪ್ರಕಟಿಸಲಿದೆ ಎಂದಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಯಲ್ಲಿ, ಚಿಕಿತ್ಸೆ ಪಡೆಯುತ್ತಿದ್ದ, ಅಯ್ಯಪ್ಪ ಮಾಲಾಧಾರಿಗಳ ಪೈಕಿ, ನಿನ್ನೆ ಮತ್ತು ಇಂದು ಮತ್ತೆ ಇಬ್ಬರು ಅಸುನೀಗಿದ್ದಾರೆ. ಅಡುಗೆ ಅನಿಲ ಸೋರಿ, ಬೆಂಕಿ ತಗುಲಿ ಗಾಯಗೊಂಡಿದ್ದ, 9 ಜನರ ಪೈಕಿ, ಈ ವರೆಗೆ ಮೃತಪಟ್ಟವರ ಸಂಖ್ಯೆ ಎಂಟಕ್ಕೇರಿತು. ಸದ್ಯಕ್ಕೆ ವಿನಾಯಕ ಎಂಬ ಬಾಲಕ, ಚೇತರಿಸಿಕೊಳ್ಳುತ್ತಿದ್ದಾರೆ ಎಂದು, ಕೆ.ಎಂ.ಸಿ. ಆರ್.ಐ. ನಿರ್ದೇಶಕ ಡಾಕ್ಟರ್ ಎಸ್.ಎಫ್ ಕಮ್ಮಾರ ತಿಳಿಸಿದ್ದಾರೆ. 8 ಗಾಯಾಳುಗಳು ಚಿಕಿತ್ಸೆ ಫಲಿಸದೇ ಮೃತಪಟ್ಟ ವಿಷಯ ತಿಳಿದು ದುಃಖಿತರಾಗಿದ್ದಾಗಿ, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ ಕಂಬನಿ ಮಿಡಿದಿದ್ದಾರೆ.

<><><>

ದಾವಣಗೆರೆ ಜಗಳೂರಿನ ಸಜ್ಜನ ರಾಜಕಾರಣಿ ಜೆ.ಮಹಮ್ಮದ್ ಇಮಾಂ ಅವರ ನೆನಪಿನಲ್ಲಿ ಸ್ಥಾಪಿತ, 'ಜೆ.ಎಂ ಇಮಾಂ ಸ್ಮಾರಕ' ರಾಜ್ಯ ಮಟ್ಟದ ಪ್ರಶಸ್ತಿಗೆ, ದಕ್ಷಿಣಕನ್ನಡ ಜಿಲ್ಲೆಯ ಅಕ್ಷರ ಸಂತ, ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಆಯ್ಕೆಯಾಗಿದ್ದಾರೆ. ಕಿತ್ತಳೆ ಹಣ್ಣುಗಳನ್ನು, ಮಂಗಳೂರಿನ ಬಸ್ ನಿಲ್ದಾಣದಲ್ಲಿ ಮಾರಿ, ವ್ಯಾಪಾರದ ಹಣದಿಂದ ಉಪಜೀವನ ನಡೆಸುತ್ತ, ಉಳಿಕೆ ಹಣದಲ್ಲಿ, ತಮ್ಮ ಹರೇಕಳ ಗ್ರಾಮದಲ್ಲಿ ಶಾಲೆ ತೆರೆದವರು, ಹಾಜಬ್ಬ. ಪ್ರಶಸ್ತಿ 50 ಸಾವಿರ ರೂಪಾಯಿ ನಗದು ಒಳಗೊಂಡಿದೆ. ಜನೆವರಿ 4 ರಂದು ಜಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಟ್ರಸ್ಟ್ ಸಲಹಾ ಸಮಿತಿ ಅಧ್ಯಕ್ಷ ಎನ್.ಟಿ ಎರ್ರಿಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

<><><>

ದಾವಣಗೆರೆಯಲ್ಲಿ, ಜನೆವರಿ 5 ಮತ್ತು 6 ರಂದು, ರಾಜ್ಯ ಮಟ್ಟದ ಯುವ ಜನೋತ್ಸವ ಏರ್ಪಡಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡುವರು ಎಂದು, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ತಿಳಿಸಿದ್ದಾರೆ. ಜಿಲ್ಲಾಡಳಿತ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯದ ವಿವಿಧ ಜಿಲ್ಲೆಗಳಿಂದ 2 ಸಾವಿರದ 500 ಕ್ಕೂ ಅಧಿಕ ಸ್ಪರ್ಧಾಳುಗಳು ತಮ್ಮ ಪ್ರತಿಭೆ ಅನಾವರಣಗೊಳಿಸಲಿದ್ದಾರೆ. ನಗರದ ವಿವಿಧ ಸ್ಥಳಗಳಲ್ಲಿ, ಏಳು ಸಮಾನಾಂತರ ವೇದಿಕೆ ನಿರ್ಮಿಸಲಾಗಿದೆ ಎಂದರು. ಜನವರಿ 11 ರಿಂದ ಹೊಸ ದಿಲ್ಲಿಯಲ್ಲಿ ಆಯೋಜಿತ, ರಾಷ್ಟ್ರೀಯ ಯುವಜನೋತ್ಸವದಲ್ಲಿ ಭಾಗವಹಿಸಲು, ಅರ್ಹತೆಗಳಿಸಲಿದ್ದಾರೆ ಎಂದರು.

<><><>

2024–25ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ, ಗದಗ ಜಿಲ್ಲೆಯಲ್ಲಿ ಪ್ರಾರಂಭವಾಗಿದೆ. ಗೂಗಲ್ ಪ್ಲೇ ಸ್ಟೋರ್‌ನಿಂದ, "ಹಿಂಗಾರು ರೈತರ ಬೆಳೆ ಸಮೀಕ್ಷೆ 2024"ನ್ನು ಡೌನ್ಲೋಡ್ ಮಾಡಿಕೊಂಡು, ರೈತರು ಖುದ್ದಾಗಿ, ಬೆಳೆ ವಿವರಗಳನ್ನು ದಾಖಲಿಸುವಂತೆ, ಕೃಷಿ ಇಲಾಖೆಯ, ಗದಗ ಜಿಲ್ಲೆ ಜಂಟಿ ನಿರ್ದೇಶಕಿ ತಾರಾಮಣಿ ರೈತರಲ್ಲಿ ಮನವಿ ಮಾಡಿದ್ದಾರೆ. ಬೆಳೆಯ ವಿವರಗಳನ್ನು ರೈತರು ದಾಖಲಿಸಿ, ಕನಿಷ್ಠ ಬೆಂಬಲ ಬೆಲೆ, ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಪಹಣಿಯಲ್ಲಿ ಬೆಳೆ ವಿವರ ದಾಖಲೆ ಮತ್ತು ಬೆಳೆ ಸಾಲ ಪಡೆಯಲು, ಅನುಕೂಲವಾಗುತ್ತದೆ. ಹೆಚ್ಚಿನ ಮಾಹಿತಿಗೆ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಲು ಅವರು ಕೋರಿದ್ದಾರೆ.

<><><>

ಮಹಾರಾಷ್ಟ್ರದಲ್ಲಿ ಮುಕ್ತಾಯಗೊಂಡ ಮಹಿಳೆಯರ ರಾಷ್ಟ್ರೀಯ 70 ನೇ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ ನಲ್ಲಿ ಕರ್ನಾಟಕ ಚಾಂಪಿಯನ್ ಆಗಿದೆ. ತಂಡದಲ್ಲಿ ಮೂಡಬಿದಿರೆ ಆಳ್ವಾಸ್ ಕಾಲೇಜಿನ ಆರು ಜನ, ತುಮಕೂರು, ಭದ್ರಾವತಿ, ಚಿಂತಾಮಣಿ ಹಾಗೂ ಬೆಂಗಳೂರಿನ ತಲಾ ಇಬ್ಬರು ಇದ್ದರು. ರಾಯಘಡ ಜಿಲ್ಲೆ ಕಾಮೋತೆಯಲ್ಲಿ ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಫೆಡರೇಶನ್ ಆಯೋಜಿಸಿದ್ದ ಚಾಂಪಿಯನ್ ಶಿಪ್ ಫೈನಲ್ ನಲ್ಲಿ ಕರ್ನಾಟಕದ ಮಹಿಳೆಯರು ತಮಿಳುನಾಡು ವಿರುದ್ಧ 35–30, 31–35, 35–26 ಅಂತರದಿಂದ ಜಯ ಗಳಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>